ಅವರವರದೆ ಅದ ಮಾರ್ಗ ಒಗ್ಗಿಹೋಗಿರುತ್ತದೆ. ಅದು ವೃತ್ತಿಜನ್ಯವಾಗಿರುವಂತೆ ಅನುಭವಜನ್ಯ ಮಾತುಗಾರಿಕೆಯೂ ಹೌದು.

'ನಮ್ಮ ಅಂಗಡಿಯೊಳಗ ಯಾವಾಗ್ಲೂ ಏಕ್ ನಂಬರ್ ಮಾಲ್ ಇರ್ತದರೀ ಅಣ್ಣಾಗೊಳ' ಎಂದು ವ್ಯಾಪಾರಸ್ಥರು ಹೇಳಲೇಬೇಕಾಗುತ್ತದೆ. 'ರಂಗ್ ಪಕ್ಕಾ ಮಾಲ್ ದಡೂತಿ' ಬಟ್ಟೆ ಅಂಗಡಿಯವರೂ 'ಹಂಗ ಅಂತಿರತಾರ'. ಹೋಟೆಲ್‌ಮಾಣಿಗೆ ನೀವು ಯಾವಾಗ ಕೇಳಿದರೂ, ಆತ ಕೊಡುವ ಉತ್ತರ ಅದೇ ಆಗಿರತದ. 'ಈಗೇ ಮಾಡೇದರಿ, ಐದ್ ನಿಮಿಷಾತು, ಬಿಸಿ ಬಿಸಿ ಅದ.'

'ಒಯ್ದೇ ಬಿಡ್ರಿ ನಾಳೀಗಿ ನಿಮ್ಮ ಡ್ರೆಸ್ ರೆಡಿ' ಅಂಬುವ ಟೇಲರ್‌ನಾಗಲಿ, ಏಕ್ ನಂಬರ್ ಕನ್ಯಾರೀ, ದೊಡ್ಡ ಮನೆತನಾ ಎನ್ನುವ ಮದುವೆ ಬ್ರೋಕರ್‌ನಾಗಲಿ, ಕುಂತರೇಕುಂಡ್ರಿ, ಐದ್ ಮಿನಿಟ್‌ದಾಗ ಗಾಡಿ ಬಿಡ್ತಿವೀ ಎನ್ನುವ ಟ್ಯಾಕ್ಸಿ ಡ್ರೈವರ್‌ನಾಗಲಿ... ಇವರು ಮತ್ತು ಇವರಂಥವರು 'ಹಂಗ ಅಂತಿರತಾರ' ಅಂಬೊ ಗುಂಪಿಗೆ ಸೇರಿದ ಮಹನೀಯರು. ಇದು ಅವರವರ ವೃತ್ತಿಗೆ ಅಂಟಿಕೊಂಡಿರುವಂಥ ಸಹಜ ಜೋಡುಶಬ್ದ. ಇವರೆಲ್ಲ 'ಹಂಗೇ ಅಂತಿರತಾರ' ಎಂಬ ಅವಳಿ ಶಬ್ದಗಳ ಫಲಾನುಭವಿಗಳು.

ಬೆಳಗ್ಗೆ ಎದುರಾಗುವ ಪರಿಚಿತರಿಗೆ, 'ಶರಣ್ರೀ, ಏನ್ ಈಗ ಎದ್ದಯ್ರ್ಯಾ?' ಎಂದು ಕೇಳುವುದಾಗಲಿ, ಬಸ್‌ಸ್ಟ್ಯಾಂಡಿನಲ್ಲಿ ಬ್ಯಾಗ್ ಹಿಡಿದುಕೊಂಡು ಬಸ್ ದಾರಿ ಕಾಯುತ್ತ ನಿಂತವರಿಗೆ, 'ಹ್ವ. ಊರಿಗಿ ಹೊಂಟಾಂಗ ಕಾಣಸ್ತದರೀ?' ಎನ್ನುವುದೂ, ಮದುವೆ ಮಂಟಪದಲ್ಲಿ ಭೆಟ್ಟಿಯಾಗುವ ಸ್ನೇಹಿತನಿಗೆ 'ಏನು ಮದ್ವಿಗೆ ಬಂದೀಯಾ?' ಎಂದು ವಿಚಾರಿಸುವಲ್ಲಿ, ಆಸ್ಪತ್ರೆಗೆ ಬಂದಾತನಿಗೆ 'ಯಾಕಪಾ ಏನ್ ಮೈಯಾಗ ಆರಾಮಿಲ್ಲಾ?' ಎಂದು ಕೇಳುವಲ್ಲಿಯೂ, ಮಾರ್ಕೆಟ್‌ನಲ್ಲಿ ಕಂಡವನಿಗೆ, 'ಏನು ಮಾರ್ಕೆಟಿಗೆ ಬಂದೀಯಾ?' ಎಂದೆನ್ನುವಲ್ಲಿಯೂ, ನಮ್ಮ ಪ್ರಶ್ನೆಗೆ ಉತ್ತರ ಬೇಕೇಬೇಕು ಎಂದೇನಿಲ್ಲ.

ಇವೆಲ್ಲ ಹಂಗೇ ಅನ್ನುವಂಥ ಔಪಚಾರಿಕ ಮಾತುಗಳಷ್ಟೆ. ಸುಮ್ಮನೇ ಅಂದ್ರೆ ಸುಮ್ಮನೆ ಆಡುವ ಮಾತುಗಳು ಇವು. ಏನಾದರೂ ಮಾತನಾಡಿಸಬೇಕಲ್ಲಾ, ಅದಕ್ಕಾಗಿ ಏನನ್ನೋ ಕೇಳಿ ಶಾಪವಿಮೋಚನೆ ಮಾಡಿಕೊಳ್ಳುವುದು.

ಇವೇನು ಬಿಡು ಅರ್ಥವಿಲ್ಲದವುಗಳು ಎಂದು ನಿರ್ಲಕ್ಷ್ಯ ಮಾಡಿದರೆ, 'ಅಬ್ಬಾ ಎಷ್ಟ ಅಹಂಕಾರರೀ ಈ ಮನುಷ್ಯಾಗ್, ನೋಡಿಯೂ ಹಂಗೇ ಸುಮ್ಮ ನಿಂತಾನಲ್ಲಾ?' ಎನ್ನುವ ಸ್ವಪ್ರತಿಷ್ಠೆಯವರ ಶಾಪಕ್ಕೆ ತುತ್ತಾಗುವುದಂತೂ ಖಚಿತ.

ಇಷ್ಟೆಲ್ಲಾ ಕೇಳಿದ ಮೇಲೆ, ತಾವು ನನ್ನ ಬಗ್ಗೆ, 'ಇವ್ರೂ ಹಂಗೇ ಅಂತಿರತಾರ ಬಿಡು' ಎಂದು ಕಮೆಂಟ್ ಮಾಡಬಹುದು. 'ರೂಢಿಯಾಗಿರುತ್ತದೆ ಒಬ್ಬೊಬ್ಬರಿಗೆ ಒಂದೊಂದು ನುಡಿಗಟ್ಟು' ಎಂಬ ಕವಿವಾಣಿ ನೆನಪಿಸುತ್ತ, ನಕ್ಕು ಸುಮ್ಮನಾಗುತ್ತೇನೆ. ಯಾಕೆಂದ್ರೆ, ಇವೂ ಕೂಡಾ, ಸುಮ್ಮನೆ ಅಂದ್ರೆ ಹಾಗೆ ಸುಮ್ಮನೆ ಆಡುವ ಮಾತುಗಳು, ಅಷ್ಟೆ!!

### ಮಲ್ಲಿಕಾರ್ಜುನ ಹುಲಗಬಾಳಿ

ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯವರಾದ ಮಲ್ಲಿಕಾರ್ಜುನ ಹುಲಗಬಾಳಿ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು. ಅವರ ಹಾಸ್ಯ ಬರಹಗಳು, ಲಲಿತ ಪ್ರಬಂಧಗಳು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯ, ಚೆನ್ನಮ್ಮ ವಿಶ್ವವಿದ್ಯಾಲಯ ಸೇರಿದಂತೆ ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕಗಳಲ್ಲಿ, ಮತ್ತು ಶತಮಾನದ ನೂರು ಪ್ರಬಂಧಗಳು ಸಂಕಲನದಲ್ಲಿ ಇವರ ಪ್ರಬಂಧಗಳು ಸಂಕಲಿತಗೊಂಡಿವೆ.